# ಬುಲೆಟ್ ಕ್ರೇಜ್‌ನ ಹುಡುಗಿ 'ವಿಧವೆ'

**ಭವಾನಿ**

ಝೀ ಕನ್ನಡ 'ಗಂಗಾ'ದ ಗಂಗಾ

★ *ಗಂಗಾ ಕಥೆ ಏನು?*

ಇದಕ್ಕೆ ಅನೇಕ ತಿರುವುಗಳಿವೆ. ಬಾಲ್ಯದಲ್ಲಿಯೇ ಗಂಗಾಗೆ ಮದುವೆಯಾಗಿರುತ್ತದೆ. ಗಂಡ ತೀರಿಕೊಂಡಿರುತ್ತಾನೆ. ಪುಟ್ಟ ವಿಧವೆ ಗಂಗಾ ಬನಶಂಕರಿ ಜಾತ್ರೆಯಲ್ಲಿ ಕಾಣೆಯಾಗುತ್ತಾಳೆ. ಅಪ್ಪನ ಹುಡುಕಾಟದಲ್ಲಿರುವ ಹುಡುಗಿಗೆ ಖ್ಯಾತ ವಕೀಲ ನಿರಂಜನ ಸಾಹೇಬ್ರು ಆಶ್ರಯ ಕೊಡುತ್ತಾರೆ. ಗೃಹ ಪಾಠಕ್ಕೆ ಶಿಕ್ಷಕರನ್ನು ನೇಮಿಸಿ ಅವರೇ ಸಾಕುತ್ತಾರೆ. ನಿರಂಜನ ಸಾಹೇಬರಿಗೆ ಸೂರಜ್ ಮತ್ತು ಸಾಗರ್ ಇಬ್ಬರು ಗಂಡು ಮಕ್ಕಳು. ಚಿಕ್ಕಮಗ ಸಾಗರ್ ಮತ್ತು ನನ್ನದು ಆತ್ಮೀಯ ಸ್ನೇಹ. ಸಾಹೇಬ್ರ ಸಂಬಂಧಿ ಕೊಟ್ಟೆಕಿಚ್ಚಿಗೆ ಒಮ್ಮೆ ಸಾಗರ್‌ನನ್ನು ತೆರೆದ ಕೊಳವೆ ಬಾವಿಗೆ ದೂಡುತ್ತಾನೆ. ಆ ಸಂದರ್ಭದಲ್ಲಿ ಕೊರವಂಜಿ ಸಾಗರ್ ಕನ್ಯೆಯೊಬ್ಬಳಿಗೆ ತಾಳಿ ಕಟ್ಟಿದರೆ ಅವನ ಜೀವಕ್ಕೆ ತೊಂದರೆ ಆಗುವುದಿಲ್ಲ ಎಂದು ಭರವಸೆ ನೀಡುತ್ತಾಳೆ. ಅವನ ಹೆಸರಿನಲ್ಲಿ ನಾನು ಕುಂಕುಮ ಇಟ್ಟುಕೊಳ್ಳುತ್ತೇನೆ. ಕಂಟಕದಿಂದ ಆತ ಪಾರಾಗುತ್ತಾನೆ. ಸಾಗರ್ ವಿದೇಶಕ್ಕೆ ಹೋಗಿ 14 ವರ್ಷ ಅಧ್ಯಯನ ಮಾಡಿ ಅಜ್ಜಿಗೆ ಹುಷಾರಿಲ್ಲ ಎಂದು ಈಗ ಹಿಂದಿರುಗಿದ್ದಾನೆ. ಮುಂದಿನ ಕಥೆ ತೆರೆಯ ಮೇಲೆ.

★ *ವಿಧವಾ ಕಥೆಗಳು ಸುಮಾರು ಅನಾವರಣಗೊಂಡಿವೆ 'ಗಂಗಾ' ಹೇಗೆ ಭಿನ್ನವಾಗುತ್ತದೆ?*

ಬಾಲ್ಯವಿವಾಹದ ಘಟನೆಯನ್ನು ಇಟ್ಟುಕೊಂಡು ಕಥೆಗಳು ಬಂದಿವೆ. ಅವುಗಳ ನಿರೂಪಣೆ ನಾಯಕಿ ಕೇಂದ್ರಿತವಾಗಿತ್ತು. ಪುಟ್ಟವಿಧವೆಯ ಸಾಮಾಜಿಕ ಬದುಕು, ಸಂಪ್ರದಾಯವನ್ನು ಅಷ್ಟಾಗಿ ಕಟ್ಟಿಕೊಟ್ಟಿಲ್ಲ. ಆ ನಿಟ್ಟಿನಲ್ಲಿ ಗಂಗಾ ಸಂಪ್ರದಾಯದ ಹೆಸರಿನಲ್ಲಿ ಇದ್ದ ಮೌಢ್ಯ–ಕಂದಾಚಾರದ ವಾಸ್ತವವನ್ನು ಹೇಳುತ್ತದೆ. ಕಥೆಯ ಭಾಷಾ ಹಿನ್ನೆಲೆ ಕೂಡ ಭಿನ್ನವಾಗಿದೆ. ಗದಗದ ಹಳ್ಳಿಯೊಂದರಲ್ಲಿ ಚಿತ್ರೀಕರಣ ನಡೆಯುತ್ತಿದೆ. ಉತ್ತರ ಕರ್ನಾಟಕ ಭಾಷೆ, ಹವ್ಯಕ ಭಾಷೆ, ಮೈಸೂರು ಪ್ರಾಂತ್ಯದ ಭಾಷೆ ಸೇರಿದೆ.

★ *ನಟಿಯಾಗಿದ್ದು ನೆನಪಿಸಿಕೊಂಡರೆ...*



ನಾನು ಬೆಳೆದಿದ್ದು ಹುಡುಗನಂತೆ. ನಮ್ಮ ತಾತನಿಂದ ಬಳುವಳಿಯಾಗಿ ಬಂದ ಬುಲೆಟ್ ಓಡಿಸುವುದು ನನಗೆ ಅತ್ಯಂತ ಕ್ರೇಜ್. ಆಟೋಟದಲ್ಲಿ ಹೆಚ್ಚು ಪ್ರೀತಿ. ಕ್ರೀಡಾಂಗಣವೇ ನನ್ನ ವಿದ್ಯಾರ್ಥಿ ಜೀವನದ ಹೆಚ್ಚಿನ ಸಮಯ ತೆಗೆದುಕೊಂಡಿದೆ. ಬಿಕಾಂನಲ್ಲಿ ಪರೀಕ್ಷೆಗೆ ಕೂರಲು ಹಾಜರಾತಿ ಕಡಿಮೆ ಬಿತ್ತು. ಅದೇ ಸಮಯದಲ್ಲಿ ಕಾಲೇಜಿನಲ್ಲಿ 'ಥಿಯೇಟರ್ ಕ್ಲಬ್' ಎನ್ನುವ ಹವ್ಯಾಸಿ ರಂಗ ತಂಡ ಕಟ್ಟಿದ್ದರು. ಅದರ ಕಾರ್ಯಾಗಾರದಲ್ಲಿ ಭಾಗವಹಿಸಿದರೆ ಒಂದಕ್ಕೆ ಎರಡು ಹಾಜರಿ ಕೊಡುವುದಾಗಿ ಪ್ರಕಟಣೆ ಹೊರಡಿಸಿದ್ದರು. ಹೊಸ ರಂಗ ತಂಡ ಕಟ್ಟುವ ಉದ್ದೇಶ ಕಾಲೇಜಿಗಿತ್ತು. ಹಾಜರಾತಿ ಕೊರತೆ ತುಂಬಿಕೊಳ್ಳಲು ನೆರವಿಗೆ ಬಂತು ಎಂದು ಸೇರಿಕೊಂಡೆ.

ಅಲ್ಲಿ ನಾಟಕ ಆಡುವುದು ಅನಿವಾರ್ಯವಾಯಿತು 'ಸತ್ತವನ ಸಂತಾಪ'ಕ್ಕೆ ಬಣ್ಣ ಹಚ್ಚಿದೆ. ಅದಾದ ಮೇಲೆ 'ಜೋತಿರ್ಮೇಘ'ಕ್ಕೂ ಬಣ್ಣ ಹಚ್ಚಿದೆ. ಅದು ರಂಗಭೂಮಿಯ ರುಚಿಯನ್ನು ನನಗೆ ಹತ್ತಿಸಿತು. ಪರಿಣಾಮ ಶಶಿ ಕಲಾವಿದರು ತಂಡದ ಮೂಲಕ 'ಅಳಿಯ ದೇವರು' ವೇದಿಕೆಯ ಮೂಲಕ ಲಂಕೇಶರ 'ನನ್ನ ತಂಗಿಗೊಂದು ಗಂಡು ಕೊಡಿ' ನಾಟಕಗಳನ್ನು ಆಡಿದೆ. ಅಷ್ಟರಲ್ಲಿ 'ಗಂಗಾ'ಕ್ಕೆ ಅವಕಾಶ ಬಂತು. ತೀರಾ ಸಂಪ್ರದಾಯಸ್ಥ ಕುಟುಂಬ ನಮ್ಮದು, ಪೋಷಕರಿಗೆ ಇಷ್ಟ ಇರಲಿಲ್ಲ. ನಿರ್ದೇಶಕ ಸ್ವಪ್ನಕೃಷ್ಣ, ನಿರ್ಮಾಪಕ ದೇವರಾಜು ಸ್ವತಃ ನಮ್ಮ ತಂದೆ ಜೊತೆ ಮಾತಾಡಿದರು. ನನ್ನ ತಮ್ಮ ಕೂಡ ನನ್ನ ಬೆಂಬಲಕ್ಕೆ ನಿಂತಿದ್ದರಿಂದ ನನ್ನಿಷ್ಟದಂತೆ ನಟಿಸಲು ಸಾಧ್ಯವಾಗಿದೆ.

★ *ಮುಂದಿನ ಹೆಜ್ಜೆಗಳು ಹೇಗಿರಬೇಕು?*

ಚಿಕ್ಕವಳಿದ್ದಾಗ ಅಕೌಂಟೆಂಟ್ ಆಗಬೇಕು ಎಂದುಕೊಂಡಿದ್ದೆ. ನಾನು ಅಂದುಕೊಂಡಿದ್ದು ಆಗಿದೆ. ಕಾರ್ಪೋರೆಟ್ ಕಂಪೆನಿಯಲ್ಲಿ ಅತಿ ಅಲ್ಪಾವಧಿಯಲ್ಲಿ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಿದ್ದೇನೆ. ಅಲ್ಲಿ ವ್ಯಕ್ತಿಗಳ ಜೊತೆ ವ್ಯವಹರಿಸುವುದನ್ನು ಕಲಿತಿದ್ದೇನೆ. ಅದಾದ ಮೇಲೆ ಬಣ್ಣ ಹಚ್ಚಿದ್ದು ನನ್ನ ಬದುಕಿಗೆ ಬೇರೆಯ ಆಯಾಮ ಕಲ್ಪಿಸಿದೆ. ಹೀಗೆ ಆಕಸ್ಮಿಕಗಳ ಸರದಿಯಲ್ಲಿ ಜೀವನವನ್ನು ತೆಗೆದುಕೊಂಡು ಹೋಗುತ್ತೇನೆ. ಪೂರ್ವಯೋಜನೆಯಂತೆ ನಡೆಸುವುದಿಲ್ಲ. ಡಾನ್ಸ್ ಮಾಡಲು ಬರುತ್ತಿರಲಿಲ್ಲ. ಹಾಡಲೂ ಬರುವುದಿಲ್ಲ. ಬರೀ ಆಟ ಆಟ ಎಂದಿದ್ದವಳು ಈಗ ನಟಿಯಾಗಿದ್ದೇನೆ. ಮುಂದೆ ಏನಾಗುತ್ತೇನೋ?

★ *ಬಣ್ಣದ ಜಗತ್ತು ಹೇಗಿದೆ?*

ಬಣ್ಣದ ಜಗತ್ತು ರಂಗು ರಂಗಿನಿಂದ ಮಿಂಚುತ್ತದೆ ತೆರೆಯ ಮೇಲೆ ವೀಕ್ಷಕರ ಕಣ್ಣಿಗೆ. ಅದರ ಹಿಂದೆ ಇರುವ ಅಪಾರ ಶಕ್ತಿ, ತಾಳ್ಮೆ, ಶ್ರದ್ಧೆ ಯಾವ ಮಟ್ಟಿಗೆ ಬೇಕು ಎನ್ನುವುದು ಬಣ್ಣ ಹಚ್ಚಿದ ಮೇಲೆ ನನ್ನ ಗ್ರಹಿಕೆಗೆ ಬಂದಿದೆ. ಇಲ್ಲಿ ನಾನು ತುಂಬಾ ಕಲಿತಿದ್ದೇನೆ. ತಾಳ್ಮೆ ಸಿಕ್ಕಾಪಟ್ಟೆ ಬೇಕು. ದಿನದಲ್ಲಿ ಎಂಟು ಹತ್ತು ಗಂಟೆ ಮಲಗುತ್ತಿದ್ದವಳು ಬರೀ ನಾಲ್ಕು ಗಂಟೆ ಮಲಗುತ್ತಿದ್ದೇನೆ. ಆದರೆ ಎಂದೂ ಬೇಸರ ಅನ್ನಿಸಿಲ್ಲ. ಇಲ್ಲಿ ನೋಡಿ ಕಲಿಯುವುದು ತುಂಬಾ ಇದೆ ಎನ್ನುವುದು ಗೊತ್ತಾಗಿದೆ.

■ **ರಾಘವೇಂದ್ರ**